# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

**ಮುಕ್ತಗಂಗೋತ್ರಿ, ಮೈಸೂರು – ೫೭೦ ೦೦೬**

'ಕನ್ನಡ ಕಾಯಕ ವರ್ಷಾಚರಣೆ' ೧ನೇ ನವೆಂಬರ್ ೨೦೨೦ ರಿಂದ ೩೧ನೇ ಅಕ್ಟೋಬರ್ ೨೦೨೧ ರವರೆಗೆ

---

**ದಿನಾಂಕ: 01–03–2021 ರಂದು ಅಪರಾಹ್ನ 03:30 ಗಂಟೆಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಗಳ ಕಚೇರಿ ಸಭಾಂಗಣದಲ್ಲಿ ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆದ 57ನೇ ಶೈಕ್ಷಣಿಕ ಮಂಡಳಿ ಸಾಮಾನ್ಯ ಸಭೆಯ ನಡಾವಳಿ.**

| ಉಪಸ್ಥಿತರು | |
|---|---|
| **ಪ್ರೊ. ಎಸ್. ವಿದ್ಯಾಶಂಕರ್**<br>ಮಾನ್ಯ ಕುಲಪತಿಗಳು ಹಾಗು ಅಧ್ಯಕ್ಷರು<br>ಶೈಕ್ಷಣಿಕ ಮಂಡಳಿ,<br>ಕರಾಮುವಿ, ಮೈಸೂರು. | **ಪ್ರೊ. ಲಿಂಗರಾಜ ಗಾಂಧಿ**<br>ಕುಲಸಚಿವ ಮತ್ತು ಸದಸ್ಯ ಕಾರ್ಯದರ್ಶಿಗಳು<br>ಶೈಕ್ಷಣಿಕ ಮಂಡಳಿ,<br>ಕರಾಮುವಿ, ಮೈಸೂರು. |
| **ಡಾ. ಕಾಂಬ್ಳೆ ಅಶೋಕ್**<br>ಡೀನ್ (ಶೈಕ್ಷಣಿಕ) ಹಾಗು<br>ಸದಸ್ಯರು<br>ಶೈಕ್ಷಣಿಕ ಮಂಡಳಿ,<br>ಕರಾಮುವಿ, ಮೈಸೂರು. | **ಡಾ. ಎ. ಖಾದರ್ ಪಾಷಾ**<br>ಹಣಕಾಸು ಅಧಿಕಾರಿಗಳು ಹಾಗು ಸದಸ್ಯರು<br>ಶೈಕ್ಷಣಿಕ ಮಂಡಳಿ,<br>ಕರಾಮುವಿ, ಮೈಸೂರು. |
| **ಡಾ. ಮಹಾದೇವನ್ ಕೆ**<br>ಕುಲಸಚಿವ (ಪರೀಕ್ಷಾಂಗ) ಹಾಗು ಸದಸ್ಯರು<br>ಶೈಕ್ಷಣಿಕ ಮಂಡಳಿ,<br>ಕರಾಮುವಿ, ಮೈಸೂರು. | **ಡಾ. ಷಣ್ಮುಖ**<br>ಡೀನ್ (ಅಧ್ಯಯನ ಕೇಂದ್ರಗಳು),<br>ಸದಸ್ಯರು ಶೈಕ್ಷಣಿಕ ಮಂಡಳಿ,<br>ಕರಾಮುವಿ, ಮೈಸೂರು. |
| ಗೈರುಹಾಜರಿ | |
| **ಡಾ. ಲಕ್ಷ್ಮಿ .ಎನ್**<br>ಮುಖ್ಯಸ್ಥರು, ಶಿಕ್ಷಣಶಾಸ್ತ್ರ ಅಧ್ಯಯನ ಹಾಗು ಸಂಶೋಧನಾ ವಿಭಾಗ<br>ಸದಸ್ಯರು ಶೈಕ್ಷಣಿಕ ಮಂಡಳಿ, ಕರಾಮುವಿ, ಮೈಸೂರು. | |
| ವಿಶೇಷ ಆಹ್ವಾನಿತರು | |
| **ಡಾ. ನಿರಂಜನ್ ರಾಜ್**<br>CIQA ನಿರ್ದೇಶಕರು<br>ಕರಾಮುವಿ, ಮೈಸೂರು. | **ಡಾ. ಹೆಚ್. ರಾಜೇಶ್ವರಿ**<br>ವಿಶೇಷಾಧಿಕಾರಿ – ಡೀನ್ (ಶೈಕ್ಷಣಿಕ)<br>ಕರಾಮುವಿ, ಮೈಸೂರು. |

ಸಭೆಗೆ ಹಾಜರಾಗಿದ್ದ ಸದಸ್ಯರುಗಳನ್ನು ಮಾನ್ಯ ಕುಲಪತಿಗಳು ಸ್ವಾಗತಿಸುವುದರೊಂದಿಗೆ ಸಭೆಯು ಪ್ರಾರಂಭವಾಯಿತು. ಮುಂದುವರೆದು ಮಾನ್ಯ ಕುಲಪತಿಗಳು ಮಾತನಾಡುತ್ತಾ, 57ನೇ ಶೈಕ್ಷಣಿಕ ಮಂಡಳಿ ಸಾಮಾನ್ಯ ಸಭೆಯ ಕಾರ್ಯಸೂಚಿಯನ್ನು ಸಭೆಯಲ್ಲಿ ಮಂಡಿಸಲು ಡೀನ್ (ಶೈಕ್ಷಣಿಕ) ಅವರಿಗೆ ಸೂಚಿಸಿದರು.

**ಕುಲಸಚಿವರು** **ಕುಲಪತಿಗಳು**

## ವಿಷಯ ಸಂಖ್ಯೆ: 57.01

**ವಿಷಯ** : ಸಮೀಕರಣ ಸಮಿತಿ (Equivalence Committee) ಸಭೆಯ ನಡಾವಳಿಯ ಬಗ್ಗೆ.

****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪ್ರವೇಶಾತಿಗೆ ಬಾಹ್ಯ ವಿಶ್ವವಿದ್ಯಾನಿಲಯಗಳಿಂದ ಬರುವ ವಿದ್ಯಾರ್ಥಿಗಳ ಶೈಕ್ಷಣಿಕ ವಿದ್ಯಾರ್ಹತೆ ಹಾಗು ಇನ್ನಿತರೆ ವಿಷಯಗಳ ಬಗ್ಗೆ ಪರಿಶೀಲಿಸಿ ಕ್ರಮವಹಿಸುವ ಕುರಿತು ಮಾನ್ಯ ಕುಲಸಚಿವರ ಅಧ್ಯಕ್ಷತೆಯಲ್ಲಿ, ಇತರೆ ಶಾಸನಬದ್ಧ ಅಧಿಕಾರಿಗಳನ್ನು ಒಳಗೊಂಡಂತೆ ಖಾಯಂ ಸಮೀಕರಣ ಸಮಿತಿ (Equivalence Committee) ಯನ್ನು ರಚಿಸಿ (ವಿ.ವಿ. ಅಧಿಸೂಚನೆ ಸಂಖ್ಯೆ: ಕರಾಮುವಿ/ ಡೀನ್(ಶೈ)/01/2020–21, ದಿನಾಂಕ: 19–11–2020) ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ.

ಸದರಿ ಸಮೀಕರಣ ಸಮಿತಿಯು 2020–21ರ ಜುಲೈ (ಸೆಪ್ಟೆಂಬರ್ – ಅಕ್ಟೋಬರ್) ಆವೃತ್ತಿಯ ಪ್ರವೇಶಾತಿ ಸಂಬಂಧದಲ್ಲಿ ವಿವಿಧ ಕೋರ್ಸ್‌ಗಳಿಗೆ ಪ್ರವೇಶಾತಿ ಬಯಸಿದ್ದ ವಿದ್ಯಾರ್ಥಿಗಳ ಪೈಕಿ ವಿದ್ಯಾರ್ಹತೆ ಸಂಬಂಧದಲ್ಲಿ ಗೊಂದಲ ಉಂಟಾಗಿದ್ದ ಪ್ರಕರಣಗಳಲ್ಲಿನ ವಿದ್ಯಾರ್ಥಿಗಳ ಶೈಕ್ಷಣಿಕ ದಾಖಲಾತಿಗಳನ್ನು ಸಮೀಕರಣ ಸಮಿತಿಯ ಮುಂದೆ ದಿನಾಂಕ : 24–11–2020ರಂದು ಸಭೆಗೆ ಮಂಡಿಸಲಾಗಿತ್ತು.

ಸಮೀಕರಣ ಸಮಿತಿಯು ಸಭೆಯಲ್ಲಿ ಒಟ್ಟು 08 ಪ್ರಕರಣಗಳನ್ನು ಪರಿಶೀಲಿಸಿ, ಅವುಗಳಿಗೆ ಸಂಬಂಧಿಸಿದಂತೆ ತೀರ್ಮಾನಗಳನ್ನು ತೆಗೆದುಕೊಂಡಿರುತ್ತದೆ. ಸದರಿ ನಡಾವಳಿಯಲ್ಲಿನ ತೀರ್ಮಾನಗಳನ್ನು ಅನುಷ್ಠಾನಗೊಳಿಸಲು ಶೈಕ್ಷಣಿಕ ಮಂಡಳಿಯ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

<u>ಚರ್ಚೆ</u> : ಸದರಿ ವಿಷಯದಲ್ಲಿನ ಅಂಶಗಳನ್ನು ಗಮನಿಸಲಾಯಿತು. Equivalence Committee ಯ ಸಭಾ ನಡಾವಳಿಯನ್ನು ಅನುಮೋದಿಸಲಾಯಿತು. ಸದರಿ ನಡಾವಳಿಯಲ್ಲಿ ವಿಷಯ ಇಸಿ 2020/08/II ವಿಷಯಕ್ಕೆ ಸಂಬಂಧಿಸಿದಂತೆ ಸಮೀಕರಣ ಸಮಿತಿಯ ತೀರ್ಮಾನದಂತೆ ಶೈಕ್ಷಣಿಕ ಮಂಡಳಿಯ ಸಭೆಯಲ್ಲಿ ಚರ್ಚೆ ಮಾಡಲಾಯಿತು.

**<u>ತೀರ್ಮಾನ</u> : ಕರಾಮುವಿಯ ಹಿಂದಿನ ಸಹಭಾಗಿತ್ವ ಸಂಸ್ಥೆಗಳ ಮೂಲಕ ಕರ್ನಾಟಕ ರಾಜ್ಯದ ಒಳಗಡೆ Non-Technical ಕಾರ್ಯಕ್ರಮಗಳಿಗೆ ಪ್ರವೇಶಾತಿ ಪಡೆದು ಅರ್ಧಕ್ಕೆ ನಿಲ್ಲಿಸಿರುವ ವಿದ್ಯಾರ್ಥಿಗಳ ಮನವಿಯ ಮೇರೆಗೆ ಅವರ ವ್ಯಾಸಂಗವನ್ನು ಮುಂದುವರೆಸಲು In-house ವ್ಯವಸ್ಥೆಯಲ್ಲಿ ಅವಕಾಶ ಕಲ್ಪಿಸಲು ತೀರ್ಮಾನಿಸಲಾಯಿತು. ಇಂತಹ ವಿದ್ಯಾರ್ಥಿಗಳ ಅರ್ಜಿಗಳನ್ನು ಅವಶ್ಯಕತೆ ಇದ್ದಲ್ಲಿ ಸಮೀಕರಣ ಸಮಿತಿಯ ಮುಂದೆ ಮಂಡಿಸಿ ಮುಂದಿನ ತೀರ್ಮಾನ ಕೈಗೊಳ್ಳುವಂತೆ ತಿಳಿಸಲಾಯಿತು. ಮುಂದುವರೆದು, 2018–19 ಶೈಕ್ಷಣಿಕ ಸಾಲಿನಿಂದ ಕರಾಮುವಿಯಲ್ಲಿ ಶೈಕ್ಷಣಿಕ ಕಾರ್ಯಕ್ರಮಗಳು ಪುನರಾರಂಭವಾಗಿದ್ದರೂ ಸಹ ಇಂತಹ ಅವಕಾಶ ಕಲ್ಪಿಸದ ಕಾರಣ ಅಂತಹ ವಿದ್ಯಾರ್ಥಿಗಳಿಗೆ ಪರಿಗಣಿಸದ ಅವಧಿಯನ್ನು ನಿರ್ಧರಿಸಲು (Period of delay condoned) ಹಾಗೂ ಶುಲ್ಕವನ್ನು ನಿಗದಿ ಪಡಿಸಲು ಸಮೀಕರಣ ಸಮಿತಿಯಲ್ಲಿ ಕ್ರಮಕೈಗೊಳ್ಳಲು ತೀರ್ಮಾನಿಸಲಾಯಿತು.**

**ಕುಲಸಚಿವರು** **ಕುಲಪತಿಗಳು**

## ವಿಷಯ ಸಂಖ್ಯೆ: 57.02

ವಿಷಯ : ಪಿಜಿ ಡಿಪ್ಲೊಮಾ ಕಾರ್ಯಕ್ರಮ ಕ್ರೆಡಿಟ್ ಹಾಗು ಕಾರ್ಯಕ್ರಮ ಅವಧಿಯನ್ನು ಪುನರ್ ಪರಿಶೀಲಿಸುವಂತೆ ಯುಜಿಸಿಗೆ ಪತ್ರ ಬರೆಯುವ ಬಗ್ಗೆ.

****

04 September 2020 ರ UGC ODL & OL Regulation ಜಾರಿಗೆ ಬಂದಿದ್ದು, ಅದರನ್ವಯ ಪಿಜಿ ಡಿಪ್ಲೊಮಾ ಕಾರ್ಯಕ್ರಮಗಳನ್ನು 2 ವರ್ಷ ಅವಧಿಯಲ್ಲಿ ನೀಡಬೇಕು ಹಾಗು 80 ಕ್ರೆಡಿಟ್‌ಗಳು ಇರಬೇಕೆಂದು ತಿಳಿಸಿದೆ. ಆದರೆ, ಪ್ರಸ್ತುತ 1 ವರ್ಷದ ಪಿಜಿ ಡಿಪ್ಲೊಮಾ ಕಾರ್ಯಕ್ರಮಗಳನ್ನು 2 ವರ್ಷದ ಎಂ.ಎ/ ಎಂ.ಕಾಂ, ಎಂ.ಎಸ್ಸಿ ಶಿಕ್ಷಣಕಾರ್ಯಕ್ರಮಗಳಿಗೆ 2ನೇ ವರ್ಷದ ಪ್ರವೇಶಾತಿಗೆ Lateral Entry ಮೂಲಕ ಪ್ರವೇಶ ನೀಡಲು ಅನುಮತಿ ನೀಡುತ್ತಿದ್ದು, ಇದರಿಂದ ವಿದ್ಯಾರ್ಥಿಗಳಿಗೆ ಹಾಗು ವಿಶ್ವವಿದ್ಯಾನಿಲಯದ ವತಿಯಿಂದ ನಡೆಸುತ್ತಿದ್ದ ಪಿಜಿ ಡಿಪ್ಲೊಮಾ ಕಾರ್ಯಕ್ರಮಗಳಿಗೆ ಬೇಡಿಕೆ ಇದ್ದು, ಇದನ್ನು ಡಿಪ್ಲೊಮಾ ಕಾರ್ಯಕ್ರಮಗಳಾಗಿ ನೀಡಿದಲ್ಲಿ ಬೇಡಿಕೆ ಕುಸಿಯುವ ಸಂಭವವಿರುತ್ತದೆ. ಈ ಸಂಬಂಧ ಪಿಜಿ ಡಿಪ್ಲೊಮಾ ಮೊದಲಿನಂತೆ 1 ವರ್ಷದ ಕಾರ್ಯಕ್ರಮವನ್ನಾಗಿ ನಡೆಸಲು ಅನುಮತಿ ನೀಡುವಂತೆ ಕೋರಿ ಯುಜಿಸಿಗೆ ಪತ್ರ ಬರೆಯುವ ಸಂಬಂಧವಾಗಿ ಶೈಕ್ಷಣಿಕ ಮಂಡಳಿಯಲ್ಲಿ ಚರ್ಚೆ ಮತ್ತು ನಿರ್ಣಯಕ್ಕಾಗಿ ವಿಷಯ ಮಂಡಿಸಿದೆ.

<u>ಚರ್ಚೆ</u> : ಸದರಿ ವಿಷಯದಲ್ಲಿನ ಅಂಶಗಳನ್ನು ಗಮನಿಸಲಾಯಿತು. 04 September 2020 ರ UGC ODL & OL Regulation ಜಾರಿಗೆ ಬಂದಿದ್ದು, ಅದರನ್ವಯ ಪಿಜಿ ಡಿಪ್ಲೊಮಾ ಕಾರ್ಯಕ್ರಮಗಳನ್ನು 2 ವರ್ಷ ಅವಧಿಯಲ್ಲಿ ನೀಡಬೇಕು ಹಾಗು 80 ಕ್ರೆಡಿಟ್‌ಗಳು ಇರಬೇಕೆಂದು ತಿಳಿಸಿದೆ ಎಂಬುದನ್ನು ಗಮನಿಸಲಾಯಿತು.

<u>ತೀರ್ಮಾನ</u> : ಕರಾಮುವಿಯಲ್ಲಿ ಪ್ರಸ್ತುತ ಚಾಲ್ತಿಯಲ್ಲಿರುವ ಪಿಜಿ ಡಿಪ್ಲೊಮಾ ಕಾರ್ಯಕ್ರಮಗಳನ್ನು ಡಿಪ್ಲೊಮಾ ಕಾರ್ಯಕ್ರಮಗಳೆಂದು ಬದಲಾಯಿಸಲು ತೀರ್ಮಾನಿಸಲಾಯಿತು. ಇಂತಹ ಕಾರ್ಯಕ್ರಮಗಳ ಪ್ರವೇಶಾತಿಗೆ ಕನಿಷ್ಠ ವಿದ್ಯಾರ್ಹತೆ (10+2+3) ಎಂದು ನಿಗದಿಗೊಳಿಸಲು ತೀರ್ಮಾನಿಸಲಾಯಿತು. ವಿವರಣಾ ಪುಸ್ತಕ, ಜಾಹಿರಾತು ಹಾಗು ಘಟಿಕೋತ್ಸವ ಪ್ರಮಾಣ ಪತ್ರದಲ್ಲಿಯೂ ಸಹ ಪ್ರವೇಶಾತಿ ವಿದ್ಯಾರ್ಹತೆಯನ್ನು ಸೂಚಿಸಿ **Graduation Based Diploma** ಎಂದು ಪರಿಗಣಿಸುವಂತೆ ತೀರ್ಮಾನಿಸಲಾಯಿತು.

ಕುಲಸಚಿವರು

ಕುಲಪತಿಗಳು

<u>ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು</u>

## ವಿಷಯ ಸಂಖ್ಯೆ: 57.03

**ವಿಷಯ** : ಸ್ನಾತಕೋತ್ತರ ಶೈಕ್ಷಣಿಕ ಕಾರ್ಯಕ್ರಮಗಳಲ್ಲಿ ಆಯ್ಕೆ ಆಧಾರಿತ ಶ್ರೇಯಾಂಕ ಪದ್ಧತಿ (CBCS) ಅಳವಡಿಸಿದ ನೂತನ ಪಠ್ಯಕ್ರಮವನ್ನು ಅನುಮೋದಿಸುವ ಬಗ್ಗೆ.

****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಆಯ್ಕೆ ಆಧಾರಿತ ಕಲಿಕಾ ಪದ್ಧತಿ (CBCS) ಯನ್ನು 2021 ಜನವರಿ ಆವೃತ್ತಿಗೆ ಅಳವಡಿಸಿಕೊಳ್ಳುವ ಸಂಬಂಧ ಎಂ.ಎ ಹಿಂದಿ, ಎಂ.ಎ ಇತಿಹಾಸ, ಎಂ.ಎ ಅರ್ಥಶಾಸ್ತ್ರ, ಎಂ.ಎ ರಾಜ್ಯಶಾಸ್ತ್ರ, ಎಂ.ಎ ಸಮಾಜಶಾಸ್ತ್ರ, ಎಂ.ಎ ಸಾರ್ವಜನಿಕ ಆಡಳಿತ, ಬಿಎಸ್ಸಿ ಗಣಕಯಂತ್ರ ವಿಜ್ಞಾನ, ಎಂ.ಎ. ಶಿಕ್ಷಣಶಾಸ್ತ್ರ ಕಾರ್ಯಕ್ರಮಕ್ಕೆ ಸಂಬಂಧಿತ ವಿಭಾಗಗಳು ಪಠ್ಯಕ್ರಮವನ್ನು ಸಿದ್ಧಪಡಿಸಿ ಅಧ್ಯಯನ ಮಂಡಳಿಗಳಿಂದ ಅನುಮೋದನೆ ಪಡೆದು ಸಲ್ಲಿಸಿರುತ್ತಾರೆ.

ಸದರಿ ಅಧ್ಯಯನ ವಿಭಾಗಗಳ ಪಠ್ಯಕ್ರಮವನ್ನು ಶೈಕ್ಷಣಿಕ ಮಂಡಳಿ ಸಭೆಗೆ ಅನುಮೋದನೆಗಾಗಿ ಮಂಡಿಸಿದೆ.

**<u>ತೀರ್ಮಾನ</u> : ಸದರಿ ಅಧ್ಯಯನ ವಿಭಾಗಗಳ CBCS ಆಧಾರಿತ ಪಠ್ಯಕ್ರಮವನ್ನು ಅನುಮೋದಿಸಲಾಯಿತು. CBCS ಆಧಾರಿತ ಪಠ್ಯಕ್ರಮವನ್ನು ಇದುವರೆಗೂ ಸಲ್ಲಿಸದೇ ಇರುವ ವಿಭಾಗಗಳಿಂದ CBCS ಆಧಾರಿತ ಸಿಲಬಸ್‌ಗಳನ್ನು ಅತಿ ಜರೂರಾಗಿ ಪಡೆಯಲು ಕ್ರಮವಹಿಸುವಂತೆ ತಿಳಿಸಲಾಯಿತು.**

## ವಿಷಯ ಸಂಖ್ಯೆ: 57.04

**ವಿಷಯ:** ಕರಾಮುವಿಯ 2018–19ನೇ ಶೈಕ್ಷಣಿಕ ಸಾಲಿನಲ್ಲಿ ಪಿಹೆಚ್.ಡಿ ಕಾರ್ಯಕ್ರಮಗಳಿಗೆ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳಿಗೆ ಕೋರ್ಸ್‌ವರ್ಕ್‌ಗಳನ್ನು ಪ್ರಾರಂಭಿಸುತ್ತಿದ್ದು, ವಿಭಾಗವಾರು ಸಲ್ಲಿಸಿರುವ ಪಿಹೆಚ್.ಡಿ ಕೋರ್ಸ್‌ವರ್ಕ್ ಸಿಲಬಸ್‌ಗಳನ್ನು ಅನುಮೋದಿಸುವ ಬಗ್ಗೆ.

******

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ 2018–19ನೇ ಶೈಕ್ಷಣಿಕ ಸಾಲಿನಲ್ಲಿ ಪಿಹೆಚ್.ಡಿ ಪ್ರವೇಶಾತಿ ಪಡೆದು ತಾತ್ಕಾಲಿಕ ನೊಂದಣಿ ಪಡೆದಿರುವ ವಿವಿಧ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ವಿದ್ಯಾರ್ಥಿಗಳಿಗೆ ಪಿಹೆಚ್.ಡಿ ಕೋರ್ಸ್‌ವರ್ಕ್ 2021ರ ಮಾರ್ಚ್ ಮಾಹೆಯಲ್ಲಿ ಪ್ರಾರಂಭವಾಗುತ್ತಿದ್ದು, ಈ ಕೆಳಕಂಡ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳ ಪಿಹೆಚ್.ಡಿ ಕೋರ್ಸ್‌ವರ್ಕ್ ಸಿಲಬಸ್‌ಗಳನ್ನು ಅನುಮೋದನೆಗಾಗಿ ಸಲ್ಲಿಸಿರುತ್ತಾರೆ.

**ಕುಲಸಚಿವರು** | **ಕುಲಪತಿಗಳು**

| ಕ್ರಮ ಸಂಖ್ಯೆ | ಕರಾಮುವಿಯ ಪಿಹೆಚ್.ಡಿ ಅಧ್ಯಯನ ಮತ್ತು ಸಂಶೋಧನಾ ವಿಭಾಗ | ಪಿಹೆಚ್.ಡಿ ಕೋರ್ಸ್‌ವರ್ಕ್ ಸಿಲಬಸ್‌ಗಳನ್ನು ಸಲ್ಲಿಸಿರುವ ವಿಭಾಗಗಳು | ಷರಾ |
|---|---|---|---|
| 1 | ಅರ್ಥಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ | ಸಲ್ಲಿಸಿರುತ್ತಾರೆ | – |
| 2 | ಇಂಗ್ಲಿಷ್ ಅಧ್ಯಯನ ಮತ್ತು ಸಂಶೋಧನಾ ವಿಭಾಗ. | ಸಲ್ಲಿಸಿರುತ್ತಾರೆ | – |
| 3 | ಇತಿಹಾಸ ಅಧ್ಯಯನ ಮತ್ತು ಸಂಶೋಧನಾ ವಿಭಾಗ. | ಸಲ್ಲಿಸಿರುತ್ತಾರೆ | – |
| 4 | ವಾಣಿಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ | ಸಲ್ಲಿಸಿರುತ್ತಾರೆ | – |
| 5 | ಗ್ರಂಥಾಲಯ ಮತ್ತು ಮಾಹಿತಿ ತಂತ್ರಜ್ಞಾನ ಅಧ್ಯಯನ ಮತ್ತು ಸಂಶೋಧನಾ ವಿಭಾಗ | ಸಲ್ಲಿಸಿರುತ್ತಾರೆ | – |
| 6 | ಭೂಗೋಳಶಾಸ್ತ್ರ (Geography) ಅಧ್ಯಯನ ಮತ್ತು ಸಂಶೋಧನಾ ವಿಭಾಗ | ಸಲ್ಲಿಸಿರುತ್ತಾರೆ | 2018–19ನೇ ಶೈಕ್ಷಣಿಕ ಸಾಲಿನಲ್ಲಿ ಪ್ರವೇಶಾತಿ ಪ್ರಕ್ರಿಯೆಗಳನ್ನು ಕೈಗೊಂಡಿರುವುದಿಲ್ಲ |
| 7 | ಜೈವಿಕ ತಂತ್ರಜ್ಞಾನ (Biotechnology) ಅಧ್ಯಯನ ಮತ್ತು ಸಂಶೋಧನಾ ವಿಭಾಗ | ಸಲ್ಲಿಸಿರುತ್ತಾರೆ | – |
| 8 | ಜೀವರಸಾಯನಶಾಸ್ತ್ರ (Biochemistry) ಅಧ್ಯಯನ ಮತ್ತು ಸಂಶೋಧನಾ ವಿಭಾಗ | ಸಲ್ಲಿಸಿರುತ್ತಾರೆ | – |
| 9 | ಸೂಕ್ಷ್ಮ ಜೀವವಿಜ್ಞಾನ (Microbiology) ಅಧ್ಯಯನ ಮತ್ತು ಸಂಶೋಧನಾ ವಿಭಾಗ. | ಸಲ್ಲಿಸಿರುತ್ತಾರೆ | – |
| 10 | ಹಿಂದಿ ಅಧ್ಯಯನ ಮತ್ತು ಸಂಶೋಧನಾ ವಿಭಾಗ | ಸಲ್ಲಿಸಿರುತ್ತಾರೆ | – |
| 11 | ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ | ಸಲ್ಲಿಸಿರುತ್ತಾರೆ | – |
| 12 | ಸಾರ್ವಜನಿಕ ಆಡಳಿತ ಅಧ್ಯಯನ ಮತ್ತು ಸಂಶೋಧನಾ ವಿಭಾಗ | ಸಲ್ಲಿಸಿರುತ್ತಾರೆ | – |
| 13 | ನಿರ್ವಹಣಾಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ | ಸಲ್ಲಿಸಿರುತ್ತಾರೆ | – |
| 14 | ರಾಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ | ಸಲ್ಲಿಸಿರುತ್ತಾರೆ | – |
| 15 | ಶಿಕ್ಷಣಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ | ಸಲ್ಲಿಸಿರುತ್ತಾರೆ | 2018–19ನೇ ಶೈಕ್ಷಣಿಕ ಸಾಲಿನಲ್ಲಿ ಪ್ರವೇಶಾತಿ ಪ್ರಕ್ರಿಯೆಗಳನ್ನು ಕೈಗೊಂಡಿರುವುದಿಲ್ಲ |
| 16 | ಸಮಾಜಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ | ಸಲ್ಲಿಸಿರುತ್ತಾರೆ | – |
| 17 | ಪುರಾತತ್ವ ಮತ್ತು ಪುರಾತನ ಇತಿಹಾಸ ಅಧ್ಯಯನ ಮತ್ತು ಸಂಶೋಧನಾ ವಿಭಾಗ | ಪ್ರಸ್ತುತ ಸಲ್ಲಿಸಿರುವುದಿಲ್ಲ | – |
| 18 | ರಸಾಯನಶಾಸ್ತ್ರ (Chemistry) ಅಧ್ಯಯನ ಮತ್ತು ಸಂಶೋಧನಾ ವಿಭಾಗ | ಪ್ರಸ್ತುತ ಸಲ್ಲಿಸಿರುವುದಿಲ್ಲ | – |
| 19 | ಮನೋವಿಜ್ಞಾನ (Psychology) ಅಧ್ಯಯನ ಮತ್ತು ಸಂಶೋಧನಾ ವಿಭಾಗ | ಪ್ರಸ್ತುತ ಸಲ್ಲಿಸಿರುವುದಿಲ್ಲ | – |
| 20 | ಪರಿಸರ ವಿಜ್ಞಾನ (Environmental Science) ಅಧ್ಯಯನ ಮತ್ತು ಸಂಶೋಧನಾ ವಿಭಾಗ | ಪ್ರಸ್ತುತ ಸಲ್ಲಿಸಿರುವುದಿಲ್ಲ | – |
| 21 | ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಅಧ್ಯಯನ ಮತ್ತು ಸಂಶೋಧನಾ ವಿಭಾಗ | ಪ್ರಸ್ತುತ ಸಲ್ಲಿಸಿರುವುದಿಲ್ಲ | – |

ಸದರಿ ವಿಷಯವನ್ನು ಶೈಕ್ಷಣಿಕ ಮಂಡಳಿ ಸಭೆಯ ಚರ್ಚೆ ಹಾಗು ನಿರ್ಣಯಕ್ಕಾಗಿ ಮಂಡಿಸಿದೆ.

**ತೀರ್ಮಾನ : ಸದರಿ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳ ಪಿಹೆಚ್‌ಡಿ ಕೋರ್ಸ್ ವರ್ಕ್ ಸಿಲಬಸ್‌ಗಳನ್ನು ಅನುಮೋದಿಸಲಾಯಿತು. ಉಳಿದ ವಿಭಾಗಗಳಿಂದ ಪಿಹೆಚ್‌ಡಿ ಕೋರ್ಸ್ ವರ್ಕ್ ಸಿಲಬಸ್‌ಗಳನ್ನು ಪಡೆಯಲು ಕ್ರಮವಹಿಸುವಂತೆ ತಿಳಿಸಲಾಯಿತು.**

**ಕುಲಸಚಿವರು** | **ಕುಲಪತಿಗಳು**

## ವಿಷಯ ಸಂಖ್ಯೆ: 57.05

ವಿಷಯ: ಪ್ರವೇಶಾತಿ ಶುಲ್ಕದಲ್ಲಿ ಕರಾಮುವಿ ಬೆಳ್ಳಿ ಹಬ್ಬದ ಶುಲ್ಕವನ್ನು ಸೇರಿಸುವ ಬಗೆಗೆ;

******

2021ರ ಜೂನ್ ತಿಂಗಳಿಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು 25 ವರ್ಷಗಳನ್ನು ಪೂರೈಸುತ್ತಿದ್ದು, ಈ ಪ್ರಯುಕ್ತ ಬೆಳ್ಳಿ ಹಬ್ಬವನ್ನು ಆಚರಿಸಲು ಉದ್ದೇಶಿಸಿದೆ. ಈ ಬೆಳ್ಳಿ ಹಬ್ಬದ ಖರ್ಚು ವೆಚ್ಚಕ್ಕಾಗಿ 2020–21ನೇ ಸಾಲಿನ ಜನವರಿ ಆವೃತ್ತಿಯ (ಮಾರ್ಚ್–ಏಪ್ರಿಲ್) ಪ್ರವೇಶಾತಿ ಶುಲ್ಕದಲ್ಲಿ ರೂ. 300/–ಗಳನ್ನು ವಿದ್ಯಾರ್ಥಿಗಳಿಂದ ಬೆಳ್ಳಿ ಹಬ್ಬ ವಿಶೇಷ ಶುಲ್ಕ (Silver Jubilee Special Fee) ವನ್ನು ಹೆಚ್ಚುವರಿಯಾಗಿ ಸಂಗ್ರಹಿಸುವ ಸಂಬಂಧ ಮಾನ್ಯ ಕುಲಪತಿಗಳು ದಿನಾಂಕ: 01.03.2021ರಂದು ಅನುಮೋದನೆ ನೀಡಿರುವ ಹಿನ್ನೆಲೆಯಲ್ಲಿ ಸದರಿ ವಿಷಯದ ಕುರಿತು ಶೈಕ್ಷಣಿಕ ಮಂಡಳಿ ಸಭೆ ಮತ್ತು ಹಣಕಾಸು ಸಮಿತಿ ಸಭೆಗಳಲ್ಲಿ ಅನುಮೋದನೆ ಪಡೆಯಲು ಸೂಕ್ತ ಕ್ರಮವಹಿಸುವಂತೆ ಡೀನ್(ಶೈಕ್ಷಣಿಕ)ರವರು ದಿನಾಂಕ:01.03.2021ರಂದು ಪ್ರವೇಶಾತಿ ವಿಭಾಗದ ನಿರ್ದೇಶಕರಿಗೆ ಟಿಪ್ಪಣಿ ನೀಡಿರುತ್ತಾರೆ (ಪ್ರತಿ ಲಗತ್ತಿಸಿದೆ).

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಕರಾಮುವಿ ಕಾಯ್ದೆ 1992ರ ಮೂಲಕ ದಿನಾಂಕ:01.06.1996ರಿಂದ ಜಾರಿಗೆ ಬಂದಂತೆ ಸ್ಥಾಪನೆಗೊಂಡು, "ಉನ್ನತ ಶಿಕ್ಷಣ ಎಲ್ಲರಿಗೂ ಎಲ್ಲೆಡೆ" ಎಂಬ ಧ್ಯೇಯದೊಂದಿಗೆ ಸಾಂಪ್ರದಾಯಿಕ ವ್ಯವಸ್ಥೆಯಡಿ ಉನ್ನತ ಶಿಕ್ಷಣ ಪಡೆಯುವುದರಿಂದ ವಂಚಿತರಾದ ವಿದ್ಯಾರ್ಥಿಗಳಿಗೆ ಮತ್ತು ಆಸಕ್ತರಿಗೆ ಉನ್ನತ ಶಿಕ್ಷಣವನ್ನು ಅವರಿರುವಲ್ಲಿಯೇ ವಿದ್ಯಾಭ್ಯಾಸ ನೀಡುವ ಸಲುವಾಗಿ ಸ್ಥಾಪಿಸಲ್ಪಟ್ಟಿರುವ ಪ್ರಾದೇಶಿಕ ಕೇಂದ್ರಗಳು / ಕಲಿಕಾ ಕೇಂದ್ರಗಳ ಮೂಲಕ ಯುಜಿಸಿಯ (ಒಡಿಎಲ್) ಮಾರ್ಗಸೂಚಿಯನ್ವಯ ಉನ್ನತ ಶಿಕ್ಷಣವನ್ನು ನೀಡುತ್ತಿದೆ.

ಈ ವಿಶ್ವವಿದ್ಯಾನಿಲಯವು ಸ್ಥಾಪನೆಗೊಂಡು, 01.06.2021ಕ್ಕೆ 25 ವರ್ಷಗಳನ್ನು ಪೂರೈಸಲಿದ್ದು, ಈ ಸಂದರ್ಭವನ್ನು ಅರ್ಥಗರ್ಭಿತವಾಗಿ ಹಾಗೂ ವ್ಯವಸ್ಥಿತವಾಗಿ ಆಚರಿಸುವ ಸಂಬಂಧದಲ್ಲಿ ಹತ್ತು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಉದ್ದೇಶವನ್ನು ವಿಶ್ವವಿದ್ಯಾನಿಲಯವು ಹೊಂದಿರುತ್ತದೆ.

ವಿಶ್ವವಿದ್ಯಾನಿಲಯವು 2020–21ರ ಜನವರಿ (ಫೆಬ್ರವರಿ– ಮಾರ್ಚ್) ಆವೃತ್ತಿಯ ಪ್ರವೇಶಾತಿಯನ್ನು ಇದೇ ಮಾರ್ಚ್ ಮಾಹೆಯ ಮೊದಲ ವಾರದಲ್ಲಿ ಪ್ರಾರಂಭಿಸಲಾಗುತ್ತಿದೆ.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ರಚಿಸಿಕೊಂಡಿರುವ Karnataka State Open University Ordinance relating to the prescription of fee – 2017 & 2018 ಆಧ್ಯಾದೇಶಗಳು ಘನತೆವೆತ್ತ ಕುಲಾಧಿಪತಿಗಳಿಂದ ಅಂಕಿತಗೊಂಡಿದ್ದು, ಸದರಿ ಆಧ್ಯಾದೇಶಗಳ ಕಂಡಿಕೆ (9)ರಲ್ಲಿ "The University may determine the fee structure as and when required with the approval of Academic Council & the Board of Management" ಎಂದಿರುರುತ್ತದೆ. ಈ ಆಧ್ಯಾದೇಶಗಳಲ್ಲಿನ ಅವಕಾಶದಡಿ ವಿಶ್ವವಿದ್ಯಾನಿಲಯದ ಬೆಳ್ಳಿ ಹಬ್ಬದ ಆಚರಣೆ ಸಂಬಂಧದಲ್ಲಿ ಡೀನ್(ಶೈಕ್ಷಣಿಕ) ವಿಭಾಗವು 2020–21ರ ಜನವರಿ (ಫೆಬ್ರವರಿ– ಮಾರ್ಚ್) ಆವೃತ್ತಿಯ ಪ್ರವೇಶಾತಿಯಲ್ಲಿ ವಿದ್ಯಾರ್ಥಿಯಿಂದ ರೂ:300/–ಗಳ ಬೆಳ್ಳಿ ಹಬ್ಬ ವಿಶೇಷ ಶುಲ್ಕ (Silver Jubilee Special Fee) ವನ್ನು ಹೆಚ್ಚುವರಿಯಾಗಿ ಸಂಗ್ರಹಿಸಲು ಪ್ರಸ್ತಾಪಿಸಿರುವ ಪ್ರಸ್ತಾವನೆ ಕುರಿತು ಚರ್ಚೆ ಹಾಗೂ ನಿರ್ಣಯಕ್ಕಾಗಿ **ಶೈಕ್ಷಣಿಕ ಮಂಡಳಿ ಸಭೆಗೆ** ವಿಷಯ ಮಂಡಿಸಲಾಗಿದೆ.

**<u>ತೀರ್ಮಾನ</u> : ಸದರಿ ಪ್ರಸ್ತಾಪವನ್ನು ಅನುಮೋದಿಸಲಾಯಿತು. ಸದರಿ ಬೆಳ್ಳಿ ಹಬ್ಬ ವಿಶೇಷ ಶುಲ್ಕವನ್ನು 2021–22 ರ ಜುಲೈ ಸಾಲಿನ ಪ್ರವೇಶಾತಿಯಲ್ಲಿಯ ಹೊಸ, ಎರಡನೇ ಮತ್ತು ಮೂರನೇ ವರ್ಷದ ಪದವಿ ವಿದ್ಯಾರ್ಥಿಗಳಿಗೂ ಹಾಗೂ ಎರಡನೇ ವರ್ಷದ ಸ್ನಾತಕೋತ್ತರ ವಿದ್ಯಾರ್ಥಿಗಳಿಂದಲೂ ಹೆಚ್ಚುವರಿ ಶುಲ್ಕವಾಗಿ ಸಂಗ್ರಹಿಸಲು ತೀರ್ಮಾನಿಸಲಾಯಿತು. ಅಂತೆಯೇ ಕರಾಮುವಿಯ ಹಿರಿಯ ವಿದ್ಯಾರ್ಥಿಗಳಿಂದ Allumini Association ಮೂಲಕ ದೇಣಿಗೆ ಸಂಗ್ರಹಿಸಲು ತೀಮಾನಿಸಲಾಯಿತು.**

**ಕುಲಸಚಿವರು** **ಕುಲಪತಿಗಳು**

**ವಿಷಯ ಸಂಖ್ಯೆ: 57.06**

**ವಿಷಯ : ವಿಶ್ವವಿದ್ಯಾನಿಲಯದಲ್ಲಿ ಕಲಿಕಾರ್ಥಿ ಸಹಾಯ ಕೇಂದ್ರಗಳ ಮೂಲಕ ಹೊಸ ಸರ್ಟಿಫಿಕೇಟ್ ಹಾಗು ಡಿಪ್ಲೊಮೊ ಕಾರ್ಯಕ್ರಮಗಳನ್ನು ಆರಂಭಿಸುವ ಕುರಿತು.**

****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಅನೇಕ ಹೊಸ ಸರ್ಟಿಫಿಕೇಟ್ ಹಾಗು ಡಿಪ್ಲೊಮೊ ಕೋರ್ಸ್‌ಗಳನ್ನು ಆರಂಭಿಸಲು ಉದ್ದೇಶಿಸಿದೆ. ಅನೇಕ ಕಲಿಕಾರ್ಥಿ ಸಹಾಯ ಕೇಂದ್ರಗಳು ಇಂತಹ ಕೆಲವು ಹೊಸ ವಿಷಯಗಳಲ್ಲಿ ವಿಶೇಷ ಪರಿಣಿತಿ ಹೊಂದಿದ್ದು ಅಂತಹ ಸಂಸ್ಥೆಗಳ ಮೂಲಕ ಉಪನ್ಯಾಸ ಹಾಗೂ ಪ್ರಾಯೋಗಿಕ ತರಗತಿಗಳನ್ನು ನಡಸಬಹುದಾಗಿದೆ. ಇಂತಹ ಅನೇಕ ಸಂಸ್ಥೆಗಳು ತಾವೇ ಪಠ್ಯಕ್ರಮ ರೂಪಿಸಿ, ಸಿದ್ದಪಾಠ ರಚಿಸಿ ಕರಾಮುವಿಯ ಅನುಮೋದನೆ ಕೋರಿರುತ್ತಾರೆ.

ಇವುಗಳ ವಿಷಯದಲ್ಲಿ ಕೆಳಗಿನ ಅಂಶಗಳನ್ನು ಅವಗಾಹನೆಗೆ ತರಲಾಗಿದೆ.

1. ಇಂತಹ ಸಂಸ್ಥೆಗಳು ಕರಾಮುವಿಯ ಕಲಿಕಾರ್ಥಿ ಸಹಾಯ ಕೇಂದ್ರಗಳಾಗಿರಬೇಕು.
2. ಅವರು ಪ್ರಾರಂಭಿಸಲು ಉದ್ದೇಶಿಸಿರುವ ಕೋರ್ಸ್‌ಗೆ ಸಂಬಂಧ ಪಟ್ಟ ವಿಭಾಗವು ಕರಾಮುವಿಯಲ್ಲಿ ಕಾರ್ಯ ನಿರ್ವಹಿಸುತ್ತಿರಬೇಕು.
3. ಸಂಸ್ಥೆಗಳು ಸಲ್ಲಿಸುವ ಪಠ್ಯಕ್ರಮ ಹಾಗೂ ಸಿದ್ದಪಾಠಗಳು ಕರಾಮುವಿಯ ಸಂಬಂಧಪಟ್ಟ ವಿಭಾಗದ ಸ್ನಾತಕ/ಸ್ನಾತಕೋತ್ತರ ಬಿ.ಓ.ಎಸ್. ನಲ್ಲಿ ಅನುಮೋದನೆಯಾಗಬೇಕು.
4. ಇಂತಹ ಕೋರ್ಸ್‌ಗಳಿಗೆ ಕನಿಷ್ಟ ಪ್ರವೇಶಾತಿ ನಿಗದಿ ಪಡಿಸಬಹುದಾಗಿದೆ. ಇಂತಹ ಕನಿಷ್ಟ ಪ್ರವೇಶಾತಿ ಇಲ್ಲದ ಪಕ್ಷದಲ್ಲಿ ಆ ಆವೃತ್ತಿಯಲ್ಲಿ ಆ ಕೋರ್ಸ್ ಅನ್ನು ರದ್ದು ಪಡಿಸಬಹುದಾಗಿದೆ.
5. ಇಂತಹ ಸಂಸ್ಥೆಗಳು ಸಿದ್ದ ಪಡಿಸಿರುವ ಸಿದ್ದಪಾಠಗಳಿಗೆ ಬೆಲೆ ನಿಗದಿಗೊಳಿಸಿ ವಿಶ್ವವಿದ್ಯಾನಿಲಯವು ಖರೀದಿಸಬಹುದಾಗಿದೆ.
6. ಇಂತಹ ಸಂಸ್ಥೆಗಳಿಗೆ ಉಪನ್ಯಾಸ ಹಾಗೂ ಪ್ರಾಯೋಗಿಕ ತರಗತಿಗಳನ್ನು ನಡೆಸಲು ಪ್ರತಿ ವಿದ್ಯಾರ್ಥಿಗೆ ಇಂತಿಷ್ಟು ಹಣ ಎಂದು ನಿಗದಿ ಪಡಿಸಬಹುದಾಗಿದೆ.
7. ಕರಾಮುವಿಯ ಸಂಬಂಧಪಟ್ಟ ವಿಭಾಗದ ಸ್ನಾತಕ/ಸ್ನಾತಕೋತ್ತರ ಪರೀಕ್ಷಾ ಮಂಡಳಿಯ ಮೂಲಕ ಪ್ರಶ್ನೆ ಪತ್ರಿಕೆ ಸಿದ್ದಗೊಳಿಸಿ, ಕರಾಮುವಿಯ ಪರೀಕ್ಷಾ ವಿಭಾಗದಿಂದ ಪರೀಕ್ಷೆ ನಡೆಸಿ ಸಂಬಂಧ ಪಟ್ಟ ವಿಭಾಗದ ಅಧ್ಯಯನ ಮಂಡಳಿಯಿಂದ ಅನುಮೋದನೆಯಾಗಿರುವ ಪರೀಕ್ಷಕರ ಮೂಲಕ ಮೌಲ್ಯಮಾಪನ ಮಾಡಿಸಬಹುದಾಗಿದೆ.

ಸದರಿ ವಿಷಯದ ಕುರಿತು ಚರ್ಚೆ ಹಾಗೂ ಅನುಮೋದನೆಗಾಗಿ ವಿಷಯ ಮಂಡಿಸಿದೆ.

**ಚರ್ಚೆ** : ಸದರಿ ವಿಷಯದಲ್ಲಿನ ಅಂಶಗಳನ್ನು ಗಮನಿಸಲಾಯಿತು. ಅನೇಕ ವಿಶೇಷ ಪರಿಣಿತಿ ಹೊಂದಿರುವ ಸಂಸ್ಥೆಗಳು ಇಂತಹ ಸರ್ಟಿಫಿಕೇಟ್ ಹಾಗು ಡಿಪ್ಲೊಮಾ ಕಾರ್ಯಕ್ರಮಗಳನ್ನು ನಡೆಸಲು ಆಸಕ್ತಿ ವಹಿಸಿರುವುದನ್ನು ಗಮನಿಸಲಾಯಿತು.

**ಕುಲಸಚಿವರು** **ಕುಲಪತಿಗಳು**

ತೀರ್ಮಾನ : ಸದರಿ ವಿಷಯದಲ್ಲಿರುವ 7 ಅಂಶಗಳಿಗೂ ಅನುಮೋದನೆ ನೀಡಲಾಯಿತು. ಮುಂದುವರೆದು, ಕೆಳಕಂಡ ಅಂಶಗಳನ್ನು ಸಹ ಗಣನೆಗೆ ತೆಗೆದುಕೊಳ್ಳಲು ತೀರ್ಮಾನಿಸಲಾಯಿತು.

1) ಇಂತಹ ಸರ್ಟಿಫಿಕೇಟ್ ಹಾಗು ಡಿಪ್ಲೊಮಾ ಕಾರ್ಯಕ್ರಮಗಳಿಗೆ ಶುಲ್ಕ ನಿಗದಿಪಡಿಸಲು ಹಾಗು ಇಂತಹ ಸಂಸ್ಥೆಗಳಿಗೆ ಉಪನ್ಯಾಸ ಹಾಗೂ ಪ್ರಾಯೋಗಿಕ ತರಗತಿಗಳನ್ನು ನೆಡಸಲು ಪ್ರತಿ ವಿದ್ಯಾರ್ಥಿಗೆ ಇಂತಿಷ್ಟು ಹಣ ಎಂದು ನಿಗದಿಗೊಳಿಸಲು ಒಂದು ಸಮಿತಿಯನ್ನು ರಚಿಸಲು ತೀರ್ಮಾನಿಸಲಾಯಿತು. ಸದರಿ ಸಮಿತಿಯು ಡೀನ್ (ಶೈಕ್ಷಣಿಕ) ರವರ ಅಧ್ಯಕ್ಷತೆಯಲ್ಲಿ ಸಂಬಂಧಪಟ್ಟ ವಿಭಾಗದ ಮುಖ್ಯಸ್ಥರು, ಡೀನ್ (ಅಧ್ಯಯನ ಕೇಂದ್ರಗಳು) ಹಾಗು ಸಂಬಂಧಟ್ಟ ಸಂಸ್ಥೆಯ ಪ್ರತಿನಿಧಿ ಸದಸ್ಯರಾಗಿರಬೇಕು ಎಂದು ತೀರ್ಮಾನಿಸಲಾಯಿತು.

2) ಇಂತಹ ಸರ್ಟಿಫಿಕೇಟ್ ಹಾಗು ಡಿಪ್ಲೊಮಾ ಕಾರ್ಯಕ್ರಮಗಳು 04 September 2020 ರ UGC ODL & OL Regulation ಗಳ ವ್ಯಾಪ್ತಿಗೆ ಬಾರದ ಕಾರಣ ಇಂತಹ ಕಾರ್ಯಕ್ರಮಗಳನ್ನು ನಡೆಸುವ ಸಂಸ್ಥೆಗಳು UGC ODL & OL Regulation ನಿಗದಿಪಡಿಸಿರುವಂತೆ ಕಲಿಕಾರ್ಥಿ ಸಹಾಯ ಕೇಂದ್ರಗಳು ಪದವಿ ಕಾಲೇಜುಗಳಾಗಿರಬೇಕು ಎಂಬ ನಿಯಮ ಅನ್ವಯಿಸುವುದಿಲ್ಲವೆಂದು ತೀರ್ಮಾನಿಸಲಾಯಿತು.

3) ಇಂತಹ ಕಾರ್ಯಕ್ರಮಗಳ ಪಠ್ಯಕ್ರಮ ಹಾಗು ವಿಭಾಗದಲ್ಲಿ ಲಭ್ಯವಿರುವ ಪರಿಣಿತಿಯ ಆಧಾರದ ಮೇಲೆ ಅವಶ್ಯಕತೆ ಬಿದ್ದಲ್ಲಿ ಸಂಸ್ಥೆಯವರ ಕೋರಿಕೆ ಮೇರೆಗೆ ಅವರು ಸೂಚಿಸುವ ಪರಿಣಿತರನ್ನು ಕರಾಮುವಿಯ ಸಂಬಂಧ ಪಟ್ಟ ವಿಭಾಗದ ಅಧ್ಯಯನ ಮಂಡಳಿ ಹಾಗು ಪರೀಕ್ಷಾ ಮಂಡಳಿಗಳ ಸಭೆಗೆ ಪರಿಣಿತರು ಎಂದು ಪರಿಗಣಿಸಿ ಆಹ್ವಾನಿಸಲು ತೀರ್ಮಾನಿಸಲಾಯಿತು.

## ವಿಷಯ ಸಂಖ್ಯೆ: 57.07

ವಿಷಯ : ಕರಾಮುವಿ ವಿದ್ಯಾರ್ಥಿಗಳಿಗೆ ಪ್ರಿಂಟೆಡ್ ಅಸೈನ್‌ಮೆಂಟ್ ಪುಸ್ತಕಗಳನ್ನು ಒದಗಿಸುವ ಬಗ್ಗೆ.

****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ವಿವಿಧ ಶೈಕ್ಷಣಿಕ ಕಾರ್ಯಕ್ರಮಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು, ಸಲ್ಲಿಸುತ್ತಿರುವ ಆಂತರಿಕ ನಿಬಂಧನೆಗಳು ವಿವಿಧ ನಮೂನೆಗಳಲ್ಲಿದ್ದು ಏಕರೂಪ ಕಾಯ್ದುಕೊಳ್ಳುವ ಉದ್ದೇಶದಿಂದ ಪ್ರಿಂಟೆಡ್ ಅಸೈನ್‌ಮೆಂಟ್ ಪುಸ್ತಕಗಳನ್ನು ವಿದ್ಯಾರ್ಥಿಗಳಿಗೆ ಸಿದ್ಧಪಾಠಗಳ ಜೊತೆಯಲ್ಲೇ ನೀಡಲು ಉದ್ದೇಶಿಸಿದೆ. ಇದಕ್ಕೆ ಸಂಬಂಧಿಸಿದ ವೆಚ್ಚವನ್ನು ವಿದ್ಯಾರ್ಥಿಯ ಪ್ರವೇಶಾತಿ ಶುಲ್ಕದಲ್ಲಿ ಭರಿಸಲು ಉದ್ದೇಶಿಸಿದೆ.

ಸದರಿ ವಿಷಯದ ಕುರಿತು ಚರ್ಚೆ ಹಾಗೂ ಅನುಮೋದನೆಗಾಗಿ ವಿಷಯ ಮಂಡಿಸಿದೆ.

ತೀರ್ಮಾನ : ಸದರಿ ವಿಷಯಕ್ಕೆ ಅನುಮೋದನೆ ನೀಡಲಾಯಿತು. ಪ್ರತಿ ಅಸೈನ್‌ಮೆಂಟ್ ಪುಸ್ತಕವನ್ನು A4 ಅಳತೆಯಲ್ಲಿ 20 ಪುಟಗಳಿರುವಂತೆ ಮುದ್ರಿಸಲು ಸಿದ್ಧಪಾಠ ವಿಭಾಗಕ್ಕೆ ಸೂಚಿಸಲು ತೀರ್ಮಾನಿಸಲಾಯಿತು. ಈ ವಿಚಾರವಾಗಿ ವಿಶ್ವವಿದ್ಯಾನಿಲಯಕ್ಕೆ ಆಗುವ ಆರ್ಥಿಕ ಹೊರೆಯನ್ನು ವಿದ್ಯಾರ್ಥಿಗಳ ಪ್ರವೇಶಾತಿ ಶುಲ್ಕದಲ್ಲಿ ವಸೂಲಾತಿ ಮಾಡಲು ಕ್ರಮ ವಹಿಸಲು ತೀರ್ಮಾನಿಸಲಾಯಿತು ಹಾಗೂ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ಪ್ರಾಜೆಕ್ಟ್ ವರದಿಗಳೂ ಸಹಾ ಏಕ ನಮೂನೆಯಲ್ಲಿ ಇರುವಂತೆ ನಿಗದಿಗೊಳಿಸಲು CIQA ನಿರ್ದೇಶಕರಿಗೆ ಸೂಚಿಸಲಾಯಿತು.

ಕುಲಸಚಿವರು

ಕುಲಪತಿಗಳು

## ವಿಷಯ ಸಂಖ್ಯೆ: 57.08

ವಿಷಯ : ಕರಾಮುವಿಯಲ್ಲಿ ಹೆಚ್ಚು ಹೆಚ್ಚು ರಾಷ್ಟ್ರೀಯ/ ಅಂತರ್‌ರಾಷ್ಟ್ರೀಯ ಸಮ್ಮೇಳನ, ವೆಬಿನಾರ್ ಹಾಗು ವಿಚಾರ ಸಂಕಿರಣ ಹಾಗು ಕಾರ್ಯಗಾರಗಳನ್ನು ಏರ್ಪಡಿಸುವ ಬಗ್ಗೆ.

****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಮಾನ್ಯತೆಯ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಹಾಗು ಕೋವಿಡ್-19 ಹಿನ್ನೆಲೆಯಲ್ಲಿ ಗಣನೀಯವಾಗಿ ರಾಷ್ಟ್ರೀಯ/ ಅಂತರ್‌ರಾಷ್ಟ್ರೀಯ ಸಮ್ಮೇಳನ, ವೆಬಿನಾರ್ ಹಾಗು ವಿಚಾರ ಸಂಕಿರಣ ಹಾಗು ಕಾರ್ಯಗಾರಗಳನ್ನು ಏರ್ಪಡಿಸದೇ ಇರುವುದನ್ನು ಗಮನಿಸಲಾಗಿದೆ. ಇತ್ತೀಚೆಗೆ ವಿ.ವಿ.ಗೆ ಭೇಟಿ ನೀಡಿದ್ದ UGC 12B Committee ಸಮಿತಿಯ ಸದಸ್ಯರು ಸಹ ಈ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಕರಾಮುವಿಯ ವಿವಿಧ ಶೈಕ್ಷಣಿಕ ವಿಭಾಗಗಳ ಹಾಗು ಪೀಠಗಳ ಮೂಲಕ ಹೆಚ್ಚು ರಾಷ್ಟ್ರೀಯ/ ಅಂತರ್‌ರಾಷ್ಟ್ರೀಯ ಸಮ್ಮೇಳನ, ವೆಬಿನಾರ್ ಹಾಗು ವಿಚಾರ ಸಂಕಿರಣ ಹಾಗು ಕಾರ್ಯಗಾರಗಳನ್ನು ಏರ್ಪಡಿಸಲು ಕ್ರಮವಹಿಸುವ ಬಗ್ಗೆ ಚರ್ಚೆ ಹಾಗೂ ಅನುಮೋದನೆಗಾಗಿ ಶೈಕ್ಷಣಿಕ ಮಂಡಳಿಯಲ್ಲಿ ವಿಷಯ ಮಂಡಿಸಿದೆ.

**ತೀರ್ಮಾನ : ಕರಾಮುವಿಯಲ್ಲಿ ವಿವಿಧ ಶೈಕ್ಷಣಿಕ ವಿಭಾಗಗಳ ಹಾಗು ಪೀಠಗಳ ಮೂಲಕ ಹೆಚ್ಚು ರಾಷ್ಟ್ರೀಯ/ ಅಂತರ್‌ರಾಷ್ಟ್ರೀಯ ಸಮ್ಮೇಳನ, ವೆಬಿನಾರ್ ಹಾಗು ವಿಚಾರ ಸಂಕಿರಣ ಹಾಗು ಕಾರ್ಯಗಾರಗಳನ್ನು ಏರ್ಪಡಿಸಲು ಕ್ರಮವಹಿಸುವ ಬಗ್ಗೆ ವಿಭಾಗಗಳಿಗೆ ಸೂಚಿಸಲು ತೀರ್ಮಾನಿಸಲಾಯಿತು. ಸದರಿ ವಿಭಾಗಗಳಿಗೆ ಇವುಗಳನ್ನು ನಡೆಸಲು ಅನುವಾಗುವಂತೆ ಮಾರ್ಗಸೂಚಿಗಳು ಹಾಗು ಸ್ಥಾಯಿ ಆದೇಶಗಳನ್ನು ನೀಡಲು ತೀರ್ಮಾನಿಸಲಾಯಿತು.**

## ವಿಷಯ ಸಂಖ್ಯೆ: 57.09

ವಿಷಯ: ವಿವಿಧ ವಿಷಯಗಳಲ್ಲಿ ನೋಂದಣಿಯಾಗಿರುವ ವಿದ್ಯಾರ್ಥಿಗಳ ಸಂಶೋಧನಾ ಅರ್ಧವಾರ್ಷಿಕ ವರದಿಗಳನ್ನು ಪರಿಗಣಿಸುವ ಬಗೆಗೆ.

* * * * *

ವಿಶ್ವವಿದ್ಯಾನಿಲಯದಲ್ಲಿ ಪಿಎಚ್.ಡಿ ಅಧ್ಯಾದೇಶ 2012ರ ಪ್ರಕಾರ ಪಿಎಚ್.ಡಿ ಕಾರ್ಯಕ್ರಮಕ್ಕೆ ವಿವಿಧ ವಿಷಯಗಳಲ್ಲಿ 2014-15ನೇ ಸಾಲಿನಲ್ಲಿ ತಾತ್ಕಾಲಿಕ ನೊಂದಣಿಯಾಗಿರುವ 65 ವಿದ್ಯಾರ್ಥಿಗಳಿಗೆ ಪಿ.ಎಚ್.ಡಿ ಕೋರ್ಸ್‌ವರ್ಕ್ ಪರೀಕ್ಷೆಯನ್ನು ನವೆಂಬರ್/ಡಿಸೆಂಬರ್ 2015ರ ಮಾಹೆಯಲ್ಲಿ ನಡೆಸಲು ಅಧಿಸೂಚನೆ ಹೊರಡಿಸಲಾಗಿತ್ತು. ಆದರೆ ಯು.ಜಿ.ಸಿ. ಮಾನ್ಯತೆಯ ಬಿಕ್ಕಟಿನಿಂದ ಪಿ.ಎಚ್.ಡಿ ಕಾರ್ಯಕ್ರಮವನ್ನು ತಾತ್ಕಾಲಿಕವಾಗಿ ತಡೆಹಿಡಿಯಲಾಗಿತ್ತು. ಸದರಿ ಕಾರ್ಯಕ್ರಮವನ್ನು ದಿನಾಂಕ:06.07.2019 ರಂದು ಹೊರಡಿಸಿರುವ ಕಚೇರಿ ಆದೇಶದ ಪ್ರಕಾರ ಪೂರ್ವಾನ್ವಯ ಜಾರಿಗೆ ಬಂದಂತೆ ಮುಂದುವರೆಸಲಾಗಿರುತ್ತದೆ. (ಪ್ರತಿ ಲಗತ್ತಿಸಿದೆ).

ಸದರಿ ಕಾರ್ಯಕ್ರಮದ ತಾತ್ಕಾಲಿಕ ನೋಂದಣಿಗೊಂಡಿರುವ ವಿದ್ಯಾರ್ಥಿಗಳಿಗೆ ಅಕ್ಟೋಬರ್ 2019ರಲ್ಲಿ ಪಿ.ಎಚ್.ಡಿ ಕೋರ್ಸ್‌ವರ್ಕ್ ಪರೀಕ್ಷೆಯನ್ನು ನಡೆಸಲಾಗಿದ್ದು. ಸದರಿ ಪರೀಕ್ಷೆಯಲ್ಲಿ ಅರ್ಹತೆ ಹೊಂದಿರುವ ವಿದ್ಯಾರ್ಥಿಗಳಿಗೆ ದಿನಾಂಕ: 06.01.2021ರಂದು ಹೊರಡಿಸಿರುವ ಅಧಿಸೂಚನೆಯ ಪ್ರಕಾರ ಖಾಯಂ ನೋಂದಣಿ ಮಾಡಲಾಗಿರುತ್ತದೆ. ಪಿ.ಎಚ್.ಡಿ ಆದ್ಯಾದೇಶ 2012ರ ಪರಿಚ್ಛೇಧ 20 ಮತ್ತು 21ರಲ್ಲಿ ತಿಳಿಸಿರುವಂತೆ (ಪ್ರತಿ ಲಗತ್ತಿಸಿದೆ) ವಿದ್ಯಾರ್ಥಿಗಳ ಅರ್ದವಾರ್ಷಿಕ ವರದಿಗಳನ್ನು ಖಾಯಂ ನೋಂದಣಿಯಾದ ನಂತರ ಮಾರ್ಗದರ್ಶಕರು, ವಿಭಾಗದ ಅಧ್ಯಕ್ಷರು ಮತ್ತು ಡಾಕ್ಟರಲ್ ಕಮಿಟಿ ಶಿಫಾರಸ್ಸುನಂತೆ ಪಡೆಯಬೇಕಾಗಿರುವುದರಿಂದ ವಿದ್ಯಾರ್ಥಿಗಳು ಮಾನ್ಯತೆ ಬಿಕ್ಕಟ್ಟಿನ ಅವಧಿಯಲ್ಲಿ (ಕೋರ್ಸ್‌ವರ್ಕ್ ತರಗತಿಗಳು ಮುಗಿದ ನಂತರ ತಾತ್ಕಾಲಿಕ ನೋಂದಣಿಗೊಂಡಿದ್ದ ಅವಧಿಯಲ್ಲಿ) ಸಂಶೋಧನೆ ಮಾಡಿರುವುದಾಗಿ ನೀಡಿರುವ ವರದಿಗಳನ್ನು ಪರಿಗಣನೆಗೆ ತೆಗೆದುಕೊಂಡು ನಿಯಮಾನುಸಾರ ಸಂಶೋಧನೆಯನ್ನು ಪೂರ್ಣಗೊಳಿಸಲು ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸುವ ಸಲುವಾಗಿ ಮುಂದಿನ ಶೈಕ್ಷಣಿಕ ಮಂಡಳಿಯಲ್ಲಿ ಅನುಸಮರ್ಥನೆ ಪಡೆಯಲು ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಲಾಗಿದೆ.

**ತೀರ್ಮಾನ : ಸದರಿ ವಿಷಯಕ್ಕೆ ಅನುಸಮರ್ಥನೆ ನೀಡಲಾಯಿತು.**

**ಕುಲಸಚಿವರು** | **ಕುಲಪತಿಗಳು**

ಅಂತಿಮವಾಗಿ 57ನೇ ಶೈಕ್ಷಣಿಕ ಮಂಡಳಿ ಸಭೆಗೆ ಆಗಮಿಸಿ, ಮಂಡಿತ ವಿಷಯಗಳ ಬಗ್ಗೆ ಚರ್ಚಿಸಿ, ತಮ್ಮ ಅಮೂಲ್ಯ ಸಲಹೆ, ಸೂಚನೆಗಳನ್ನು ನೀಡಿ, ಸಭೆಯನ್ನು ಸುಸೂತ್ರವಾಗಿ ನಡೆಸಿಕೊಟ್ಟಿದ್ದಕ್ಕೆ ಎಲ್ಲಾ ಸದಸ್ಯರುಗಳಿಗೂ ಮಾನ್ಯ ಕುಲಪತಿಗಳು ಧನ್ಯವಾದಗಳನ್ನು ತಿಳಿಸುವುದರೊಂದಿಗೆ ಸಭೆಯು ಮುಕ್ತಾಯಗೊಂಡಿತು.

**ಕುಲಸಚಿವರು ಹಾಗು**
**ಸದಸ್ಯ ಕಾರ್ಯದರ್ಶಿಗಳು**

**ಕುಲಪತಿಗಳು ಹಾಗು ಅಧ್ಯಕ್ಷರು**